

## ಕಳೆದ ಸಂಚಿಕೆಯಲ್ಲಿ...

ಕರವಾಚೌಥ್‌ನಲ್ಲಿ ಭಾಗವಹಿಸಿ ಬಂದ ಬಳಿಕ ಅಮ್ಮನಿಗೆ ನಡೆದ ವಿಷಯವನ್ನು ವಿವರಿಸುತ್ತಾಳೆ ಸುಗಂಧಾ. ಆಗ ನೀನು ಹೋಗುತ್ತಿರುವ ದಿಕ್ಕಿನಲ್ಲೇ ಹೋಗು, ಇದೇನು ಮಾಡುತ್ತಿದ್ದಿಯಾ, ನೀನು ಲಿವ್ ಇನ್ ರಿಲೇಷನ್‌ಶಿಪ್‌ನಲ್ಲೇ ಇರಬೇಕು ಅಂದುಕೊಂಡಿದ್ದರೆ ಹಾಗೇ ಇರು, ಇಲ್ಲವಾದರೆ ಮದುವೆಯಾಗು ಎಂದು ಸಲಹೆ ಕೊಡುತ್ತಾರೆ ಅಮ್ಮ. ಐದು ವರ್ಷ ಜೊತೆಯಲ್ಲೇ ಇದ್ದ ರಿತಿಕ್ ತನ್ನ ಅಧಿಕಾರ ಚಲಾಯಿಸಲಾರಂಭಿಸಿದ. ಈಗ ಮೊದಲಿನ ಆಕರ್ಷಣೆ, ಬಾಂಧವ್ಯ ಇಲ್ಲದೆ ಪರಸ್ಪರ ಬೇರೆಯಾಗುವ ಬಗ್ಗೆ, ಮನೆಗೆ ಹಾಕಿದ ಹಣವನ್ನು ಪಡೆದು ಹೊರಹೋಗುವ ಬಗ್ಗೆ ಚಿಂತನೆ ನಡೆಸುತ್ತಾರೆ. ಸಂಬಂಧ ಹಳಸಿ ಪರಸ್ಪರ ನಿಂದನೆ ಶುರುವಾಗುತ್ತದೆ. ಪ್ರತ್ಯೇಕವಾಗುವ ಹಂತಕ್ಕೆ ಬಂದು ಮುಟ್ಟುತ್ತದೆ. ಮನಸ್ಸಿಗೆ ತೀರ ಬೇಸರವಾದಾಗ ಸುಗಂಧಾ ಮನೆಯಿಂದ ಹೊರಬೀಳುತ್ತಾಳೆ. ರಿತಿಕ್ ಹೇಳಿದ 'ಇಟ್ಟುಕೊಂಡವಳು' ಎಂಬ ಪದ ಸುಗಂಧಾಳನ್ನು ತುಂಬ ಕಾಡುತ್ತದೆ.

ತಿಳಿಯುತ್ತದೆ; ಹೀಗೆಯೇ ರಿತಿಕ್‌ನ ಅನೇಕ ಕಹಿ ಸತ್ಯಗಳು ಕಾಲದೊಂದಿಗೆ ನನ್ನೆದುರು ಪ್ರಕಟಗೊಂಡವು. ಆದರೆ ಪ್ರೀತಿಸುವಾಗ, ಪ್ರಿಯಕರನ ಕೆಟ್ಟತನ ಮತ್ತು ಕಹಿನಿಜಾಂಶಗಳನ್ನು ನೋಡಿಯೂ ನೋಡದಂತೆ ಮಾಡಲಾಗುತ್ತದೆ. ನಾನು ಸಹ ಇದನ್ನೇ ಮಾಡುತ್ತಿದ್ದೆ.

ರಿತಿಕ್ ನನ್ನನ್ನು ಪ್ರೀತಿಸಲಿಲ್ಲ ಎಂದಲ್ಲ. ತುಂಬಾ ಪ್ರೀತಿಸಿದ. ಒಮ್ಮೆ ನಾನು ಕಾಯಿಲೆ ಬಿದ್ದೆ. ನನಗೆ ಮಲೇರಿಯಾ ಆಗಿತ್ತು. ನೂರಾ ಎರಡು ಡಿಗ್ರಿ ಜ್ವರ ಬಂದಿತ್ತು. ವೈದ್ಯರು ಹಾಲಿನೊಂದಿಗೆ ಮಾತ್ರೆಗಳನ್ನು ತಿನ್ನಲು ಸೂಚಿಸಿದ್ದರು. ನಾನು ಹಾಲು ಕುಡಿಯುತ್ತಿರಲಿಲ್ಲ. ಜ್ವರದಿಂದಾಗಿ ನಾಲಿಗೆಯ ರುಚಿ ಹಾಳಾಗಿತ್ತು. ನಾನು ರಿತಿಕ್‌ಗೆ, ಹಾಲಿನ ರುಚಿ ಸರಿಯಿಲ್ಲ, ನಾನು ಕುಡಿಯಲ್ಲ ಎಂದೆ. ಹೀಗೆ ನಾನು ಹಾಲು ಕುಡಿಯದೆ ಇರಲು ನೆಪ ಮಾಡುತ್ತಿದ್ದೆ.

'ಹಾಲಿನ ರುಚಿ ಚೆನ್ನಾಗಿಯೇ ಇದೆಯಲ್ಲ, ನೋಡು', ಅವನು ನಾನು ಒಂದು ಗುಟುಕು ಕುಡಿದ ಹಾಲನ್ನೇ ಕುಡಿದು ಹೇಳಿದ್ದ.

'ಓಹ್, ನೀನು ನನ್ನ ಎಂಜಲು ಹಾಲು ಕುಡಿದೆ? ನನಗೆ ಜ್ವರವಿದೆ, ನಿನಗೂ ಬಂದರೆ?'

'ನನಗೇನೂ ಆಗಲ್ಲ, ನೀನು ಸುಮ್ಮೆ ಹಾಲು ಕುಡಿ' ಎಂದಿದ್ದ ರಿತಿಕ್. ರಿತಿಕ್‌ಗೆ ನನ್ನ ಬಗ್ಗೆ ಇದ್ದ ಪ್ರೀತಿಯನ್ನು ನೋಡಿ ನಾನು ಅತ್ಯಂತ ಖುಷಿಗೊಂಡಿದ್ದೆ. ನನ್ನ ಕಾಲುಗಳಿಗೆ ನೋವು ಬಾಧಿಸಿದಾಗ, ಅವನು ನನ್ನ ಕಾಲುಗಳಿಗೆ ಎಣ್ಣೆ ಹಚ್ಚಿ ಮಸಾಜು ಮಾಡುತ್ತಿದ್ದ. ಅದಕ್ಕೆ ಪ್ರತಿಯಾಗಿ ಅವನೆಂದೂ ತನ್ನ ಕಾಲುಗಳನ್ನು ಮಸಾಜು ಮಾಡಿಸಿಕೊಳ್ಳಲಿಲ್ಲ. ಅವನು ಮದ್ಯವನ್ನು ಸೇವಿಸುತ್ತಿದ್ದ, ಆದರೆ ಕುಡಿದು ಮನಸ್ಸಿಗೆ ಬಂದಂತೆ ಮಾತನಾಡುತ್ತಿರಲಿಲ್ಲ. ಮದ್ಯ ಸೇವಿಸಿದಾಗ, ಎಂದೂ ಅವನು ಹೊಡೆಯುವುದಾಗಲಿ ಅಥವಾ ಜಗಳ ಮಾಡುವುದಾಗಲಿ ಮಾಡಲಿಲ್ಲ. ಖಂಡಿತವಾಗಿ ರಿತಿಕ್‌ನಲ್ಲಿ ಒಳ್ಳೆಯತನಗಳಿದ್ದವು. ಆದರೆ ಬೇರೆಯಾಗುವ ಭಾವನೆ ಎಲ್ಲಿಂದ ಬಂತು? ಪರಿವಾರದ ಅಥವಾ ಸಮಾಜದ ಒತ್ತಡವೇ? ಶಿಲೆಯ ಮೇಲೆ ಹಗ್ಗ ಸರಿದಾಡುತ್ತಿದ್ದರೆ, ಅದರ ಗುರುತು ಶಿಲೆಯ ಮೇಲೆ ಬೀಳುತ್ತದೆ ಎನ್ನಲಾಗುತ್ತದೆ; ರಿತಿಕ್‌ನ ವಿಚಾರಗಳಲ್ಲಿ ಗುರುತುಗಳು ಬಿದ್ದಿದ್ದವು. ನಾನು ಸ್ವತಂತ್ರ ಹೆಣ್ಣಿಗೆ ಬದಲಾಗಿ ಹೆಂಡತಿಯಂತೆ ಜೀವನವನ್ನು ಸಾಗಿಸುತ್ತಿದ್ದೆ, ಆದರೆ ರಿತಿಕ್ ಒಮ್ಮೆ ಗಂಡನಂತೆ ವರ್ತಿಸಿದರೆ, ಇನ್ನೊಮ್ಮೆ ನಿಜವಾದ ಗಂಡನಂತಾಗಲು ಚಡಪಡಿಸುತ್ತಿದ್ದ.

ಅದೊಂದು ದಿನ ರಿತಿಕ್ ಹೇಳಿದ್ದ, 'ನಾವೀಗ ಮಗುವನ್ನು ಹೆರಬೇಕು, ನಾವು ತಡ ಮಾಡಿದರೆ ನಮ್ಮ ವೃದ್ಧಾಪ್ಯದಲ್ಲಿ ಅವನು ನಮಗೆ ಆಸರೆಯಾಗುವುದಿಲ್ಲ'.

'ನಾನು ಸಹ ಇದನ್ನೇ ಯೋಚಿಸುತ್ತೇನೆ', ಇನ್ನೊಬ್ಬರ ಮಕ್ಕಳನ್ನು ನೋಡಿದಾಗ ನನಗೂ ಈ ಆಸೆ ಚಿಗುರುತ್ತಿತ್ತು.

'ಹಾಗಾದ್ರೆ ಇದು ಫೈನಲ್ ತಾನೇ! ನಾಳೆ ಹೋಗಿ ನಿನ್ನ ಕಾಪರ್‌ಟೀ ತೆಗೆಸೋಣ' ಎಂದಿದ್ದ ರಿತಿಕ್. ಆದರೆ ಕ್ಷಣ ಕಾಲ ನಿಂತು ಹೇಳಿದ್ದ, 'ಇಲ್ಲ, ನಾವು ಮದುವೆಯಾಗದೆ ಮಕ್ಕಳನ್ನು ಹೆರಲಾರೆವು, ಅದು ಕಾನೂನು ಬದ್ಧವಾಗಿದ್ದರೂ, ಕಾನೂನು ಬಾಹಿರ ಎನ್ನಿಸಿಕೊಳ್ಳುವುದು, ಇದು ನನಗೆ ಒಪ್ಪಿಗೆಯಿಲ್ಲ'.

ಮಗುವಿನ ವಿಷಯಕ್ಕೆ ಅಲ್ಲಿಯೇ ಪರದೆ ಬಿತ್ತು. ಆದರೂ ಈ ವಿಷಯ ನನ್ನ ಮನಸ್ಸಿನಲ್ಲಿ ಬೇರೂರಿತ್ತು. ಈಗ ರಿತಿಕ್‌ನ ಮನಸ್ಸಿನಲ್ಲಿ ಸಾಮಾನ್ಯ ಸಾಮಾಜಿಕ ಜೀವನವೊಂದರ ಆಸೆಗಳು ಮೈಮುರಿಯುತ್ತಿವೆ ಎಂದು ಅನ್ನಿಸಿತು.

***

ಬೆಳಿಗ್ಗೆ ಸುಮಾರು ಐದು ಗಂಟೆಗೆ ನಾನು ಅಮ್ಮನ ಬಳಿಗೆ ಹೋದೆ. ಬಾಗಿಲು ತೆರೆಯುತ್ತಲೇ ಅಮ್ಮನ ಮುಖದಲ್ಲಿ ಚಿಂತೆ ಮೂಡಿತ್ತು.

'ಏನಾಯ್ತು ಸುಗಂಧಾ? ಹೀಗೆ ಇದ್ದಕ್ಕಿದ್ದಂತೆ...?'

'ನನಗೆ ಮೊದಲು ಒಳಗೆ ಹೋಗಲು ದಾರಿ ಬಿಡು', ಅಮ್ಮ ಬದಿಗೆ ಸರಿದರು. ಡ್ರೈವರ್ ಕಾರಿನಿಂದ ನನ್ನೆಲ್ಲಾ ಲಗ್ಗೇಜುಗಳನ್ನು ತಂದು ವರಾಂಡದಲ್ಲಿಟ್ಟ. ಅಮ್ಮ ತಮ್ಮ ಮನೆಯಲ್ಲಿ ಅತಿಥಿಗಳು ಉಳಿದುಕೊಳ್ಳಲು ಒಂದು ಚಿಕ್ಕ ಕೋಣೆಯನ್ನು ಮಾಡಿಸಿದ್ದರು. ಆದರೆ ಯಾವ ಅತಿಥಿಗಳೂ ಬರುತ್ತಿರಲಿಲ್ಲ. ನಾನು ಅದೇ ಕೋಣೆಯಲ್ಲಿ ಡ್ರೈವರ್ ವಿಶ್ರಾಂತಿಯನ್ನು ಪಡೆಯಲು ವ್ಯವಸ್ಥೆ ಮಾಡಿದೆ. ಆ ಕೋಣೆಗೆ ಒಂದು ಅಟಾಚ್ಡ್ ಟಾಯ್ಲೆಟ್‌ಬಾತ್‌ರೂಮಿತ್ತು.

'ಏನಾದ್ರು ತಿನ್ತೀಯ?' ನಾನು ಡ್ರೈವರನನ್ನು ವಿಚಾರಿಸಿದೆ.

'ಇಲ್ಲ'

'ಚಹಾ ಕುಡೀತೀಯ?'

'ಇಲ್ಲ'

'ಸರಿ, ಬಾ. ನಾನು ನಿನಗೆ ನಿನ್ನ ರೂಮನ್ನು ತೋರಿಸ್ತೀನಿ, ನೀನು ವಿಶ್ರಾಂತಿ ಪಡಿ. ಆಮೇಲೆ ಏನು ಮಾಡಬೇಕೆಂದು ಯೋಚಿಸೋಣ'. ಡ್ರೈವರ್ ದಣಿದಿದ್ದು, ಅವನಿಗೆ ನಿದ್ರೆಯ ಅವಶ್ಯಕತೆಯಿದೆ ಎಂಬುದು ನನಗೆ ತಿಳಿದಿತ್ತು. ಅವನು ಮರುದಿನ ಬಸ್ ಅಥವಾ ರೈಲಿನಲ್ಲಿ ಮರಳಿ ಹೋಗಬೇಕಿತ್ತು. ಡ್ರೈವರ್ ನಿದ್ರಿಸಲು ಹೊರಟು ಹೋದ. ನಾನು ಬೆಡ್‌ರೂಮಿನಲ್ಲಿದ್ದ ಅಮ್ಮನ ಹಾಸಿಗೆಯ ಬಳಿ ಬಂದು ಅಮ್ಮನೊಂದಿಗೆ ಮಾತಿಗೆ ಆರಂಭಿಸಿದೆ.

'ನಾನು ಶಾಶ್ವತವಾಗಿ ಮನೆಯನ್ನು ತ್ಯಜಿಸಿ ಬಂದಿದ್ದೇನೆ, ಅಮ್ಮಾ' ಎಂದೆ.

'ಅವನ ಜೊತೆ ಜಗಳವಾಯ್ತ?' ಅಮ್ಮ ಕೇಳಿದರು.

'ಹೌದು'

'ಹಾಗಾದ್ರೆ ಒಪ್ಪಂದ ಸಹ ಆಗುತ್ತೆ, ಚಿಂತಿಸಬೇಡ', ಅಮ್ಮ ಪ್ರೀತಿಯಿಂದ ನನ್ನ ತಲೆಕೂದಲುಗಳನ್ನು ನೇವರಿಸುತ್ತಾ ಹೇಳಿದರು.

'ಇಲ್ಲ, ನಾನು ಒಪ್ಪಂದ ಮಾಡಿಕೊಳ್ಳಲು ಬಯಸುವುದಿಲ್ಲ. ನಮ್ಮ ಪ್ರೀತಿಯ ನೂಲುಗಳಲ್ಲಿ ಗಂಟುಗಳು ಬಿದ್ದಿವೆ. ಅವು ಮೊದಲ ನೋಟಕ್ಕೆ ಕಾಣಿಸದಿದ್ದಾಗ್ಯೂ ಆ ಗಂಟು ತುಂಬಾ ದೊಡ್ಡದು' ಎಂದೆ.

'ಸರಿ, ನಿನಗೆ ಸರಿ ಅನ್ನಿಸಿದಂತೆ ಮಾಡು! ಅವನ ಜೊತೆಗಿರುವ ನಿರ್ಣಯ ಸಹ ನಿನ್ನದಾಗಿತ್ತು, ಈಗ ಬೇರೆಯಾಗುವ ನಿರ್ಣಯ ಸಹ ನಿನ್ನದೇ ಆಗಿದೆ. ನಿನ್ನ ಎಲ್ಲಾ ತೀರ್ಮಾನಗಳೊಂದಿಗೆ ನಾನಿದ್ದೇನೆ'. ಅಮ್ಮ ನನ್ನನ್ನು ತನ್ನ ಮಡಿಲಿನಲ್ಲಿ ಮಲಗಿಸಿಕೊಳ್ಳುತ್ತಾ ಹೇಳಿದರು. ಅವರ ಮಡಿಲಿನಲ್ಲಿ ತಲೆಯಿಟ್ಟ ಕೂಡಲೇ ನಾನು ಹತ್ತಿಯಂತೆ ಹಗುರವಾದೆ. ನಾನು ಓರ್ವ ಚಿಕ್ಕ ಮಗುವಿನಂತೆ ಮುದುಡಿಕೊಳ್ಳುತ್ತಿದ್ದೆ; ಅಮ್ಮನ ಸ್ನೇಹ ನನ್ನನ್ನು ಅವರ ಬಾಹುಗಳಲ್ಲಿ ಬಂಧಿಸಿಕೊಳ್ಳುತ್ತಿತ್ತು. ನನಗೆ ಯಾವಾಗ ನಿದ್ರೆ ಆವರಿಸಿತೋ, ತಿಳಿಯದು. ಎಚ್ಚರವಾದಾಗ ಮಧ್ಯಾಹ್ನದ ಹನ್ನೆರಡು ಗಂಟೆಯಾಗಿತ್ತು. ನಾನು ತಡಬಡಿಸಿ ಎದ್ದೆ. ಕಣ್ಣುಗಳನ್ನು ಒರೆಸಿಕೊಳ್ಳುತ್ತಾ ಅಡುಗೆ ಮನೆಗೆ ಹೋದೆ; ಅಮ್ಮ ಡ್ರೈವರ್‌ಗೆ ಅನ್ನ ಬಡಿಸುತ್ತಿದ್ದರು.

'ಅಮ್ಮಾ, ಇವತ್ತು ನೀವು ಆಫೀಸಿಗೆ ಹೋಗಲಿಲ್ವ?' ಅಮ್ಮನನ್ನು ಕೇಳಿದೆ.

'ಇಲ್ಲ, ಫೋನ್ ಮಾಡಿ ಹೇಳಿದ್ದೇನೆ, ಇಂಪಾರ್ಟೆಂಟ್ ಕೆಲಸಗಳಿದ್ದರೆ, ನನಗೆ ಅವರೇ ಫೋನ್ ಮಾಡ್ತಾರೆ', ಎಂದರು ಅಮ್ಮ.

'ನೋಡು! ನೀನು ಬಯಸಿದರೆ ಉಳಿಯಬಲ್ಲೆ, ಹಾಗಂತ ಇಲ್ಲಿ ಯಾವ ಕೆಲಸವಿಲ್ಲ. ನಿನಗಿಷ್ಟ ಬಂದಾಗ ನೀನು ಹೋಗಬಹುದು', ನಾನು ಡ್ರೈವರ್‌ಗೆ ಹೇಳಿದೆ. ನಾನು ಮತ್ತೆ ಕೀರ್ತಿಗೆ ಫೋನ್ ಮಾಡಿದೆ. ನಾನು ಆರಾಮಾಗಿ ತಲುಪಿರುವ ವಿಷಯ ಹೇಳಿ, ಡ್ರೈವರನನ್ನು ಮರಳಿ ಕಳುಹಿಸುತ್ತಿರುವುದಾಗಿ ಹೇಳಿದೆ. (ಸಶೇಷ)